# ಶುಭವಾರ್ತೆ

ಉಚಿತ ಮಾರಾಟಕ್ಕಿಲ್ಲ

5

> ನಂಬುವವರೆಲ್ಲರಿಗೂ ಅವರು ಸುನ್ನತಿಯಿಲ್ಲದಾಗ್ಯೂ ಅಬ್ರಹಾಮನು ಮೂಲ ತಂದೆಯಾದನು. ಅವರು ನೀತಿವಂತರೆಂದು ಎಣಿಸಲ್ಪಡುವರು. — ರೋಮಾ. 4:11.

## ದೇವರ ವಾಗ್ದಾನಗಳು.

(ಹಿಂದಿನ ಸಂಚಿಕೆಯಿಂದ)

ಅಬ್ರಹಾಮ್; ಇಸಾಕ, ಯಾಕೋಬರು ತಮ್ಮ ನಂಬಿಕೆ ಮತ್ತು ವಿಧೇಯತೆಯಿಂದಲೇ ದೇವರನ್ನು ಸಂತೋಷಪಡಿಸಿದರು. ಆದರೆ ಅವರ ಸಂತಾನದವರು ಅವರ ರಕ್ತಮಾಂಸವನ್ನು ವಂಶ ಪಾರಂಪರ್ಯವಾಗಿ ಹೊಂದಿದ್ದರೂ ಕೂಡ, ಅವರಲ್ಲಿ ಅವರ ಪಿತೃಗಳ ಸ್ವಭಾವ ಇಲ್ಲದ್ದರಿಂದ ಅವರು ಇಸ್ರಾಯೇಲ್ಯರಲ್ಲ ಮತ್ತು ''ಸಂತಾನಕ್ಕೆ ಬಾಧ್ಯರಲ್ಲ.'' ಬಹುತೇಕ ಇಸ್ರಾಯೇಲ್ಯರು ಇಂಥಹ ವರ್ಗಕ್ಕೆ ಸೇರಿದವರಾದ್ದರಿಂದ ಅವರು ನಿರಾಕರಿಸಲ್ಪಟ್ಟರು.

ಹಾಗಿದ್ದಲ್ಲಿ ವಾಗ್ದತ್ತ ಮಕ್ಕಳ ಜನಾಂಗವು ಎಲ್ಲಿಂದ ಬರುತ್ತದೆ ? ಇದರಲ್ಲಿ ಒಂದು ಭಾಗವು ಯೆಹೂದ್ಯ ಜನಾಂಗದಲ್ಲಿ ಶರೀರ ಸಂಬಂಧದಲ್ಲಿಯೂ ಅಬ್ರಹಾಮನ ವಂಶದವರಾಗಿದ್ದು ನಂಬಿಕೆ ಮತ್ತು ವಿಧೇಯತೆಯಲ್ಲಿ ಬಂದವರಾಗಿರುತ್ತಾರೆ. ಇವರೇ ''ವಾಗ್ದಾನದ ಮಕ್ಕಳು.'' ಇವರು ಕ್ರಿಸ್ತನು ಬಂದಾಗ ಎಬ್ಬಿಸಲ್ಪಡುತ್ತಾರೆ. ಉಳಿದ ಮತ್ತೊಂದು ಭಾಗವು ಅಂಧಕಾರದ ಯುಗಗಳಿಂದ ಅಪೋಸ್ತಲರ ಕಾಲದಲ್ಲಿ ಅಬ್ರಹಾಮನ ವಂಶದವರಾಗಲು ಕರೆಯಲ್ಪಟ್ಟ ಅನ್ಯ ಜನಾಂಗಗಳವರಾಗಿರುತ್ತಾರೆ. ''ದೇವರು ಮೊದಲಲ್ಲಿ ಅನ್ಯ ಜನರನ್ನು ಕಟಾಕ್ಷಿಸಿ ನೋಡಿ, ತನ್ನ ಹೆಸರಿಗಾಗಿ ಅವರೊಳಗಿಂದ ಒಂದು ಪ್ರಜೆಯನ್ನು ಆರಿಸಿಕೊಂಡ ವಿಧವನ್ನು'' ಶ್ರೀ ಪೇತ್ರನು ಹೇಳುತ್ತಾನೆ (ಅ.ಕೃ.15:7—14). ಶ್ರೀ ಪೌಲನು ಎಫೆಸದವರಿಗೆ ಬರೆದ ಪತ್ರಿಕೆಯಲ್ಲಿ, ''ಅನ್ಯ ಜನರು ಸುವಾರ್ತೆಯ ಮೂಲಕ ಕ್ರಿಸ್ತಯೇಸುವಿನಲ್ಲಿರುವವರಾಗಿ ಯೆಹೂದ್ಯರೊಂದಿಗೆ ಬಾಧ್ಯರೂ ಒಂದೇ ದೇಹದೊಳಗಣ ಅಂಗಗಳೂ, ಅಬ್ರಹಾಮನಿಗುಂಟಾದ ವಾಗ್ದಾನದಲ್ಲಿ ಪಾಲುಗಾರರೂ ಆಗಿದ್ದಾರೆ'' ಎಂದು ತಿಳಿಸುತ್ತಾನೆ (ಎಫೆಸ 3:6). ಮತ್ತೆ ಶ್ರೀ ಪೌಲನು ರೋಮಾಪುರದವರಿಗೆ ಬರೆಯುತ್ತಾ, ಅಬ್ರಹಾಮನು ಯಾವ ರೀತಿಯಲ್ಲಿ ಸುನ್ನತಿಯಿಲ್ಲದವನಾಗಿದ್ದಾಗಲೇ ನಂಬಿಕೆಯಿಂದಲೇ ನೀತಿವಂತನೆಂದು ಎಣಿಸಲ್ಪಟ್ಟನೋ ಹಾಗೆಯೇ ನಂಬುವವರೆಲ್ಲರೂ ಸುನ್ನತಿಯಿಲ್ಲದವರಾದಾಗ್ಯೂ ನಂಬಿಕೆಯಿಂದ ಅಬ್ರಹಾಮನ ಸಂತತಿಯಾಗುವರೆಂದು ತಿಳಿಸಿದ್ದಾನೆ (ರೋಮಾ. 4:11—12 ). ಆದ್ದರಿಂದ ಯಾರು ಅಬ್ರಹಾಮನ ವಿಶ್ವಾಸವನ್ನು ಅಂಗೀಕರಿಸಿ, ದೀಕ್ಷಾಸ್ನಾನವೆಂಬ ಸುನ್ನತಿಯಲ್ಲಿ ಕ್ರಿಸ್ತನನ್ನು ಧರಿಸಿಕೊಳ್ಳುತ್ತಾರೋ ಅಂಥವರು ಅಬ್ರಹಾಮನ ಮಕ್ಕಳೂ ಅವನಿಗೆ ಮಾಡಿದ ವಾಗ್ದಾನಕ್ಕೆ ಬಾಧ್ಯರೂ ಆಗುತ್ತಾರೆ. ''ಕ್ರಿಸ್ತನನ್ನು ಧರಿಸಿಕೊಂಡಿರಿ..... ನೀವು ಕ್ರಿಸ್ತನವರಾಗಿದ್ದರೆ, ಅಬ್ರಹಾಮನ ಸಂತತಿಯವರೂ ವಾಗ್ದತ್ತಕ್ಕನುಸಾರವಾಗಿ ಬಾಧ್ಯರೂ ಆಗಿದ್ದೀರಿ.''(ಗಲಾತ್ಯ 3:27,29). ಮತ್ತು ಅಂಥವರು ''ಇಸಾಕನಂತೆ ವಾಗ್ದಾನದ ಮಕ್ಕಳಾಗಿರುತ್ತಾರೆ.'' (ಗಲಾತ್ಯ 4:28) ಎಂದು ಶ್ರೀ ಪೌಲನು ತಿಳಿಸುತ್ತಾನೆ.

ಆದರೆ ಇಂದು ಏನಾಗಿದೆ ? ಅಬ್ರಹಾಮನಿಗೆ ಮಾಡಿದ ವಾಗ್ದಾನದಂತೆ, ಆತನ ಸಂತತಿಯು ಇಂದು ಬಲಿಷ್ಠ ಜನಾಂಗವಾಗಿದೆಯೇ? ಇಲ್ಲ. ಏಕೆ? ಹಾಗಿದ್ದಲ್ಲಿ ದೇವರ ವಾಕ್ಯವನ್ನು ನಾವು ಓದಿ ಸರಿಯಾದ ರೀತಿಯಲ್ಲಿ ಗ್ರಹಿಸಿದರೆ, ಆತನ ವಾಗ್ದಾನವು ಸುಳ್ಳಲ್ಲದು ಅದು ಮುಂದೆ ನೆರವೇರಬೇಕಾಗಿದೆಯೆಂಬುದು ಸ್ಪಷ್ಟವಾಗುತ್ತದೆ. ಈಗ ಅವರು ಬಲಹೀನರಾಗಿಯೂ ಚದುರಿದವರೂ ಆಗಿರುತ್ತಾರೆ. ಯೋಹಾನನು ತನ್ನ ಸುವಾರ್ತೆಯಲ್ಲಿ ''ಕ್ರಿಸ್ತನು ಚದುರಿರುವ ದೇವರ ಮಕ್ಕಳನ್ನು ಒಟ್ಟುಗೂಡಿಸುವುದಕ್ಕೆ ಸಹ ಸಾಯುವುದಕ್ಕಿದ್ದನು'' ಎಂದು ಬರೆದಿರುವುದನ್ನು ನಾವು ನೋಡುತ್ತೇವೆ (ಯೋಹಾನ 11:52). ಶ್ರೀ ಪೌಲನೂ ಕೂಡ ಥೆಸಲೋನಿಕದವರಿಗೆ ಬರೆಯುವಾಗ ಹೀಗೆ ತಿಳಿಸುತ್ತಾನೆ, ''ನಾವು ಆತನ ಬಳಿಯಲ್ಲಿ ಕೂಡಿಕೊಳ್ಳುವುದರ ವಿಷಯವಾಗಿಯೂ'' (2 ಥೆಸ 2:1). ಹಾಗಾದರೆ ಇದು ಯಾವಾಗ ನೆರವೇರುತ್ತದೆ? ''ಇಗೋ ಯಾರಿಂದಲೂ ಎಣಿಸಲಾಗದಂಥ ಮಹಾ ಸಮೂಹವು ಸಿಂಹಾಸನದ ಮುಂದೆಯೂ ಯಜ್ಞದ ಕುರಿಯಾದಾತನ ಮುಂದೆಯೂ ನಿಂತಿರುವುದನ್ನು ಕಂಡೆನು. ಅವರು ಸಕಲ ಜನಾಂಗ ಕುಲ ಪ್ರಜೆಗಳವರೂ ಸಕಲ ಭಾಷೆಗಳನ್ನಾಡುವವರೂ ಆಗಿದ್ದರು.'' (ಪ್ರಕ 7:9). ಯಾರೀ ಸಮೂಹ? ಯೆಶಾಯನು ಹೀಗೆ ಮುಂತಿಳಿಸಿದ್ದಾನೆ. ''ಚಿಕ್ಕವನಿಂದ ಒಂದು ಕುಲವಾಗುವದು; ಅಲ್ಪನಿಂದ ಬಲವಾದ ಜನಾಂಗವಾಗುವದು.'' (ಯೆಶಾಯ 60:22). ಕ್ರಿಸ್ತನು ಭೂಲೋಕಕ್ಕೆ ಹಿಂದಿರುಗಿ ದೇವರ ರಾಜ್ಯ ಸ್ಥಾಪನೆಯಾದಾಗ, ಇದು ನೆರವೇರುವುದು. ''ಯಾವನು ಜಯಶಾಲಿಯಾಗಿದ್ದು, ನನಗೆ ಮೆಚ್ಚಿಕೆಯಾದ ಕೃತ್ಯಗಳನ್ನು ನಡಿಸುತ್ತಾನೋ ಅವನಿಗೆ ನಾನು ನನ್ನ ತಂದೆಯಿಂದ ಹೊಂದಿದ ಅಧಿಕಾರದಂತೆ ಜನಾಂಗಗಳ ಮೇಲೆ ಅಧಿಕಾರವನ್ನು ಕೊಡುವೆನು. ಅವನು ಕಬ್ಬಿಣದ ಕೋಲಿನಿಂದ ಅವರನ್ನು ಆಳುವನು.'' (ಪ್ರಕ 2:26) ಈ ವಚನಗಳನ್ನು

ನೋಡಿ — ದಾನಿ. 7:18,27; ಮತ್ತಾಯ 5:5; ಕೀ 37:11; ಪ್ರಕ 3:21.

**(2) ಅಬ್ರಹಾಮನೂ ಅವನ ಸಂತತಿಯೂ ವಾಗ್ದಾನದಲ್ಲಿ ಸೂಚಿಸಿದ ದೇಶವನ್ನು ಸ್ವಾಧೀನ ಪಡಿಸಿ ಕೊಳ್ಳುವುದು.**

ದೇವರು ಅಬ್ರಹಾಮನಿಗೆ ವಾಗ್ದಾನ ಮಾಡಿದ ದೇಶ ಯಾವುದು? ಅದರ ಎಲ್ಲೆಗಳೇನು? 'ಆ ದಿನದಲ್ಲಿ ಯೆಹೋವನು ಅಬ್ರಾಮನ ಸಂಗಡ ಒಡಂಬಡಿಕೆ ಮಾಡಿಕೊಂಡು — ಐಗುಪ್ತ ದೇಶದ ನದಿಯಿಂದ ಯೂಫ್ರೇಟೀಸ್ ಮಹಾ ನದಿಯವರೆಗೂ ಈ ದೇಶವನ್ನೆಲ್ಲಾ ನಿನ್ನ ಸಂತತಿಯವರಿಗೆ ಕೊಟ್ಟಿದ್ದೇನೆ'' (ಆದಿ. 15:18). 'ನೀನು ಪ್ರವಾಸವಾಗಿರುವ ಕಾನಾನ್ ದೇಶವನ್ನೆಲ್ಲಾ ನಿನಗೂ ನಿನ್ನ ಸಂತತಿಗೂ ಶಾಶ್ವತ ಸ್ವಾಸ್ತ್ಯವನ್ನಾಗಿ ಕೊಡುತ್ತೇನೆ'' (ಆದಿ 17:8).

ಈ ವಾಗ್ದಾನವು ನೆರವೇರಿದೆಯೋ? ಇಲ್ಲ. ಇದು ಇನ್ನೂ ನೆರವೇರಬೇಕಾಗಿದೆ. ನಾವು ಸೂಕ್ಷ್ಮವಾಗಿ ನೋಡುವುದಾದರೆ, ಮೋಶೆಯು ಬರೆಯುವಾಗ ಅಬ್ರಹಾಮನು ಸ್ವದೇಶಸ್ಥರಿಂದ ಒಂದು ಹೊಲವನ್ನು ತನ್ನ ಸ್ವಂತಕ್ಕಾಗಿ ಅಂದರೆ ತನ್ನ ಸಾರಳು ಸತ್ತಾಗ ಹೂಳಿಡಲು ಸ್ಥಳವಿಲ್ಲದೆ ಕೊಂಡನು. ಅಬ್ರಹಾಮನು ಪರದೇಶದವನೂ ಪ್ರವಾಸಿಯೂ ಆಗಿದ್ದನು. (ಆದಿ 23:4). ಶ್ರೀ ಪೌಲನು ಇಬ್ರಿಯರಿಗೆ ಬರೆದ ಪತ್ರಿಕೆಯಲ್ಲಿ, ಅಬ್ರಹಾಮನು ವಾಗ್ದತ್ತ ದೇಶಕ್ಕೆ ಬಂದಾಗ ಅಲ್ಲಿ ಅನ್ಯ ದೇಶದವನಂತೆ ಡೇರೆಗಳಲ್ಲಿ ಇದ್ದುಕೊಂಡು ಪ್ರವಾಸಿಯಾಗಿ ಬದುಕಿದನು ಎಂದು ತಿಳಿಸುತ್ತಾನೆ (ಇಬ್ರಿಯ 11:9). ಸ್ತೆಫನನೂ ಕೂಡ ಇದನ್ನೇ ಸಮರ್ಥಿಸುತ್ತಾನೆ. ''ಅವನಿಗೆ ಕಾಲಿಡುವಷ್ಟು ಭೂಮಿಯನ್ನು ಸ್ವಾಸ್ತ್ಯವಾಗಿ ಕೊಡಲಿಲ್ಲ'' (ಅ. ಕೃ. 7:5).

ಇದರಿಂದ ನಾವು ತಿಳಿಯುವುದೇನು ? ಅಬ್ರಹಾಮನು ವಾಗ್ದತ್ತ ದೇಶದಲ್ಲಿ ಪರದೇಶದವನೂ ಪ್ರವಾಸಿಯೂ ಆಗಿದ್ದು, ಕಾಲಿಡುವಷ್ಟು ಭೂಮಿಯೂ ಅವನಿಗೆ ಸ್ವಾಸ್ತ್ಯಕ್ಕೆ ಕೊಡಲಿಲ್ಲವಾದರೆ, ಆ ವಾಗ್ದಾನವು ಅವನ ಜೀವಿತ ಕಾಲದಲ್ಲಿ ನೆರವೇರಲಿಲ್ಲವೆಂಬುದು ಸ್ಪಷ್ಟವಾಗಿದೆ. ಅಂದರೆ ಆ ವಾಗ್ದಾನವು ಇನ್ನೂ ಮುಂದೆ ನೆರವೇರ ಬೇಕಾಗಿದೆ. ಇಲ್ಲ, ಅದು ಅವನ ಸಂತತಿಯವರಾದ ಇಸ್ರಾಯೇಲ್ಯರಲ್ಲಿ ನೆರವೇರಿದೆ; ಏಕೆಂದರೆ ಅವರು ಆ ದೇಶವನ್ನು ಸ್ವಾಧೀನಪಡಿಸಿಕೊಂಡು ಅನುಭವಿಸಿದರಲ್ಲಾ ಎಂದು ಅನೇಕರು ಹೇಳಬಹುದು. ಇದಕ್ಕೆ ಉತ್ತರವಾಗಿ ಶ್ರೀ ಪೌಲನು ಈ ರೀತಿ ಹೇಳುತ್ತಾನೆ: '' ನಿನ್ನ ಸಂತತಿಗಳಿಗೆ ಎಂದು ಹೇಳಿ ಅನೇಕರನ್ನು ಸೂಚಿಸದೆ ನಿನ್ನ ಸಂತತಿಗೆ ಎಂದು ಹೇಳಿ ಒಬ್ಬನನ್ನೇ ಸೂಚಿಸುತ್ತಾನೆ. ಆ ಒಬ್ಬನು ಕ್ರಿಸ್ತನೇ. '' (ಗಲಾತ್ಯ 3:16—18). ಆದರೂ ಈ ವಾಗ್ದಾನವನ್ನು ಅಬ್ರಹಾಮನಿಗೆ ಮಾಡಿದನು. ಮತ್ತೆ ಶ್ರೀ ಪೌಲನು ಈ ರೀತಿ ಹೇಳುತ್ತಾನೆ, ''ನೀನು ಲೋಕಕ್ಕೆ ಬಾಧ್ಯನಾಗುವಿ ಎಂಬ ವಾಗ್ದಾನವು ಅಬ್ರಹಾಮನಿಗಾಗಲೀ ಅವನ ಸಂತತಿಯವರಿಗಾಗಲೀ ಧರ್ಮಶಾಸ್ತ್ರದಿಂದ ಆದದ್ದಲ್ಲ; ನಂಬಿಕೆಯೆಂಬ ನೀತಿಯಿಂದ ಆದದ್ದೇ ''(ರೋಮಾ. 4:13—14). ಧರ್ಮಶಾಸ್ತ್ರದಿಂದಲ್ಲ ನಂಬಿಕೆಯೆಂಬ ನೀತಿಯಿಂದಲೇ ಎಂದು ಶ್ರೀ ಪೌಲನು ಸ್ಪಷ್ಟ ಪಡಿಸುತ್ತಾನೆ. ಈಗಿನ ಇಸ್ರಾಯೇಲ್ಯರು ಎಂಥವರು? ಧರ್ಮಶಾಸ್ತ್ರವನ್ನೇ ಹಿಡಿದವರು. ನಂಬಿಕೆಯೆಂಬ ನೀತಿಯಿಲ್ಲದವರು — ಕ್ರಿಸ್ತನನ್ನು ತಿರಸ್ಕರಿಸಿದವರು. ಇಸ್ರಾಯೇಲ್ಯರು ಕಾನಾನ್ ದೇಶ

(3ನೇ ಪುಟ ನೋಡಿ)

<u>ಓದುಗರಿಗೆ.</u>

ನಮ್ಮ ಐದನೇ ಸಂಚಿಕೆಯು ದೇವರ ಕೃಪೆಯಿಂದ ಕಾಲಕ್ಕೆ ಸರಿಯಾಗಿ ಓದುಗರಿಗೆ ತಲುಪಿಸಲು ಸಾಧ್ಯವಾಗಿರುವುದಕ್ಕೆ ಸಂತೋಷಿಸುತ್ತೇವೆ. ಪ್ರಿಯ ಓದುಗರು ಈ ಸಂಚಿಕೆಗಳಲ್ಲಿ ಬರುತ್ತಿರುವ ಸತ್ಯವೇದ ವಿಷಯಗಳಿಂದ ವೈಯುಕ್ತಿಕ ಆತ್ಮೀಯ ಲಾಭ ಹೊಂದುವದಲ್ಲದೆ, ಕತ್ತಲೆಯಲ್ಲಿರುವ ತಮ್ಮ ಬಂಧು ಮಿತ್ರರಿಗೂ ಮಾರ್ಗದರ್ಶನವಾಗಲು ಸಹಕಾರಿಯಾಗುತ್ತಿದೆಯೆಂದು ನಂಬಿರುತ್ತೇವೆ. ಈ ಪತ್ರಿಕೆಯನ್ನು ಪಡೆಯುತ್ತಿರುವವರು ಇನ್ನು ಮುಂದೆಯೂ ಅದೇ ರೀತಿ ಉಚಿತವಾಗಿ ಪಡೆಯಬಯಸಿದಲ್ಲಿ, ಇದರೊಂದಿಗಿರುವ ಕೂಪನಿನಲ್ಲಿ ನಿಮ್ಮ ಇಚ್ಛೆಯನ್ನು ಬರೆದು ತಿಳಿಸಿ. ಇದಕ್ಕೆ ಚಂದಾ ಹಣವಾಗಲೀ ಮಂತಿಗೆಯಾಗಲೀ ಇಲ್ಲವೆಂದು ಗಮನದಲ್ಲಿಡಿ. ಓದಲು ಇಚ್ಛಿಸುವವರೆಲ್ಲರಿಗೂ ಇದನ್ನು ಉಚಿತವಾಗಿ ಕಳುಹಿಸುತ್ತೇವೆ.

ಭಾ. ಚಂದುದಾಸ್.

ಸಂಪುಟ 1 ಸಂಚಿಕೆ 5/1

ಪ್ರಕಾಶಕರು :

ದಿ ಕ್ರಿಸ್ಟಡೆಲ್ಫಿಯನ್ಸ್,
23/4, ಬೆನ್ಸನ್ ರಸ್ತೆ, ಬೆಂಗಳೂರು — 560 046,
ಕರ್ನಾಟಕ.
(ಕರ್ನಾಟಕ, ತಮಿಳು ನಾಡು ಮತ್ತು ಕೇರಳ ರಾಜ್ಯಗಳಿಗೆ )

(ಮೇಲ್ಕಂಡ ಸ್ಥಳದಲ್ಲಿ ಪ್ರತಿ ಭಾನುವಾರ ಸಂಜೆ 6:30 ಕ್ಕೆ ಸತ್ಯವೇದ ಪಾಠ (ಸದ್ಯಕ್ಕೆ ಇಂಗ್ಲೀಷಿನಲ್ಲಿ) ನಡೆಯುತ್ತದೆ. ಆಸಕ್ತಿಯುಳ್ಳವರಿಗೆ ಸುಸ್ವಾಗತ.)

ವನ್ನು ಹೊಂದಿದ್ದರು ಸರಿ. ಮೋಶೆಯ ಧರ್ಮಶಾಸ್ತ್ರದ ಪ್ರಕಾರ ಅವರು ಆ ದೇಶವನ್ನು ಸ್ವಾಧೀನಪಡಿಸಿಕೊಂಡರು. ಅವರು ದೇವರ ಆಜ್ಞೆಗಳ ಪ್ರಕಾರ ನಡೆದು ಕೊಂಡದ್ದೇ ಆದರೆ ಅವರು ಆ ದೇಶದಲ್ಲಿ ಬದುಕುವರು. ದೇವರ ಆಜ್ಞೆಗೆ ಮೀರಿ ನಡೆದದ್ದೇ ಆದರೆ ಅವರನ್ನು ಆ ದೇಶದಿಂದ ಚದುರಿಸಿ ಬಿಡುವುದಾಗಿ ತಿಳಿಸಿದೆ (ಧ.ಕಾ.28:15—68). ಆದರೆ ಅವರು ಆ ದೇಶವನ್ನು ಹೊಂದಿದ್ದು ಧರ್ಮಶಾಸ್ತ್ರದ ಪ್ರಕಾರ ಮತ್ತು ಕೆಲವು ನಿಬಂಧನೆಗಳಿಗೆ ಒಳಪಟ್ಟು. ಅವರು ದೇವರಿಗೆ ಅವಿಧೇಯರಾಗಿಯೇ ಇದ್ದುದರಿಂದ, ಅವರು ಆ ದೇಶದಲ್ಲಿ ಕೊನೆಯವರೆಗೂ ನಿಲ್ಲಲಿಲ್ಲ. ಇದರಿಂದ ಧರ್ಮ ಶಾಸ್ತ್ರದ ಮೂಲಕ ಬಂದ ಇಸ್ರಾಯೇಲ್ಯರು ಬಾಧ್ಯಸ್ಥರಾಗುವುದಿಲ್ಲ. ''ಧರ್ಮಶಾಸ್ತ್ರದಿಂದಲ್ಲ— ಧರ್ಮಶಾಸ್ತ್ರದವರು ಬಾಧ್ಯರಾಗಿದ್ದರೆ ನಂಬಿಕೆಯು ವ್ಯರ್ಥವಾಯಿತು.'' ಎಂದು ಶ್ರೀ ಪೌಲನು ಸ್ಪಷ್ಟವಾಗಿ ತಿಳಿಸಿದ್ದಾನೆ. (ರೋಮಾ. 4:14).

ಆದ್ದರಿಂದ ಅಬ್ರಹಾಮನೂ ಅವನ ಸಂತತಿಯಾದ ಕ್ರಿಸ್ತನೂ ಪ್ಯಾಲೆಸ್ತೈನ್ ದೇಶವನ್ನು ಸ್ವಾಸ್ತ್ಯವನ್ನಾಗಿ ಹೊಂದ ಬೇಕಾಗಿದ್ದಲ್ಲಿ, ಈ ವಾಗ್ದಾನವು ಇನ್ನೂ ನೆರವೇರಿಲ್ಲವೆಂಬುದು ಸ್ಪಷ್ಟವಾಗಿದೆ. ಅಬ್ರಹಾಮನು ಸತ್ತವರೊಳಗಿಂದ ಎದ್ದು ಆಗ ಸ್ಥಾಪಿಸಲ್ಪಡುವ ದೇವರ ರಾಜ್ಯದಲ್ಲಿ ಪ್ರವೇಶಿಸುವಾಗ ಈ ವಾಗ್ದಾನವು ನೆರವೇರುತ್ತದೆ. ಶ್ರೀ ಪೌಲನು ಹೀಗೆ ಹೇಳುತ್ತಾನೆ, ''ಅಬ್ರಹಾಮನು ಮುಂದೆ ತಾನು ಬಾಧ್ಯವಾಗಿ ಹೊಂದ ಬೇಕಾಗಿದ್ದ ಸ್ಥಳಕ್ಕೆ ಹೊರಟನು'' (ಇಬ್ರಿಯ 11:8). ಅಬ್ರಹಾಮನು ತನಗೆ ವಾಗ್ದಾನ ಮಾಡಿದ ದೇಶದಲ್ಲಿ ಪರದೇಶಸ್ಥನಾಗಿಯೂ ಪ್ರವಾಸಿಯಾಗಿಯೂ ಇದ್ದು, ಆ ದೇಶವನ್ನು ತನಗೆ ಸ್ವಾಸ್ತ್ಯವಾಗಿ ಕೊಡದೇ ಇದ್ದುದರಿಂದ ಬೇಸರಗೊಂಡು ತಾನು ಹೊರಟು ಬಂದ ದೇಶಕ್ಕೇ ವಾಪಸ್ಸು ಹೋಗಿ ಬಹುದಿತ್ತು. ಆತನು ಹಾಗೆ ಮಾಡಿದನೇ? ಆತನು ವಿಶ್ವಾಸದಿಂದಲೇ ಪ್ರವಾಸಿಯಾಗಿ ಮೃತಿ ಹೊಂದಿದನು. ಆತನೂ ಆತನ ಮಕ್ಕಳೂ ವಾಪಸ್ಸು ಹೋಗಲು ಅವಕಾಶವಿತ್ತು. ಅವರು ಆ ರೀತಿ ಹಿಂದಕ್ಕೆ ಹೋಗಿದ್ದಲ್ಲಿ, ಅವರು ಸ್ವದೇಶದ ಸ್ವಾಸ್ತ್ಯವನ್ನು ಪಡೆಯುವದೇ ಅಲ್ಲದೆ ತಮ್ಮ ಬಂಧು ಬಳಗ ಸ್ನೇಹಿತರೊಂದಿಗೆ ಇರುತ್ತಿದ್ದರು. ಆದರೆ ಅವರು ಹಾಗೆ ಮಾಡಲಿಲ್ಲ. ಹಾಗೆ ಮಾಡಿದ್ದಲ್ಲಿ ಅವರು ವಾಗ್ದಾನಗಳಿಂದ ವಂಚಿತರಾಗುತ್ತಿದ್ದರು. ತಾವು ಹೊರಟು ಬಂದ ದೇಶಗಳಿಗಿಂತ ಅವರಿಗೆ ಮಾಡಿದ ವಾಗ್ದಾನಗಳು ಶ್ರೇಷ್ಠವೆಂದು ಅವರು ಪರಿಗಣಿಸಿದರು. ಅಲ್ಲದೆ ತಮ್ಮ ಸ್ವದೇಶವು ಅಶಾಶ್ವತವಾದದ್ದು. ದೇವರು ಶಾಶ್ವತವಾದ ಸ್ವಾಸ್ತ್ಯವನ್ನು ವಾಗ್ದಾನ ಮಾಡಿರುವುದು ಅವರಿಗೆ ಮನದಟ್ಟಾಗಿತ್ತು. ದೇವರು ಹಾಕಿದ ಅಸ್ತಿವಾರದ ಮೇಲಿನ ಸ್ವಾಸ್ತ್ಯವು ಶಾಶ್ವತವಾದದ್ದೆಂದು ಅಬ್ರಹಾಮ, ಇಸಾಕ, ಯಾಕೋಬರು ನಂಬಿ, ತಮಗೆ ವಾಗ್ದಾನ ಮಾಡಿದ ದೇಶದಲ್ಲಿ ಪರದೇಶಿಗಳಾಗಿಯೂ ಪ್ರವಾಸಿಗಳಾಗಿಯೂ ಬದುಕಿದರು. ಅದು ನೆರವೇರಲು ಬಹು ದೂರವೆಂದು ಅವರು ತಿಳಿದಿದ್ದರು.

''ಅವರು ವಾಗ್ದಾನದ ಫಲವನ್ನು ಹೊಂದದೆ ಮೃತಿ ಹೊಂದಿದರು'' ಎಂದು ಶ್ರೀ ಪೌಲನು ಬರೆಯುತ್ತಾನೆ (ಇಬ್ರಿಯ 11:13). ಹಾಗಿದ್ದಲ್ಲಿ ವಾಗ್ದಾನದ ಫಲವನ್ನು ಹೊಂದ ಬೇಕಾದರೆ ಅವರು ಸತ್ತವರೊಳಗಿಂದ ಎದ್ದು ಬರಬೇಕಾಗಿದೆ ಅಲ್ಲವೇ? ಯಾವಾಗ? ''ಸತ್ತವರಿಗೆ ತೀರ್ಪಾಗುವಾಗ — ಪ್ರವಾದಿಗಳಿಗೆ, ದೇವಜನರಿಗೆ ಪ್ರತಿಫಲವನ್ನು ಕೊಡುವಾಗ .....'' ಎಂದು ಶ್ರೀ ಯೋಹಾನನು ಪ್ರಕಟನೆ 11:18 ರಲ್ಲಿ ಹೇಳಿದ್ದಾನೆ. ಕೀರ್ತನಕಾರನು ಹೇಳುವಂತೆ ಅಬ್ರಹಾಮ, ಇಸಾಕ, ಯಾಕೋಬರು ಪ್ರವಾದಿಗಳಾಗಿದ್ದರು. (ಕೀ 105:15). ಸತ್ತವರಿಗೆ ತೀರ್ಪಾಗುವುದು ಯಾವಾಗ? ಕ್ರಿಸ್ತನು ಹಿಂದಿರುಗಿದಾಗ. ''ಈ ಲೋಕದ ರಾಜ್ಯಗಳು ನಮ್ಮ ಕರ್ತನೂ ಮತ್ತು ಆತನ ಕ್ರಿಸ್ತನ ರಾಜ್ಯಗಳಾಗುತ್ತವೆ'' (ಪ್ರಕ 11:15). ''ಆತನ ಪ್ರತ್ಯಕ್ಷತೆಯಲ್ಲಿಯೂ ಆತನ ರಾಜ್ಯದಲ್ಲಿಯೂ ಆತನು ಜೀವಿಸುವವರಿಗೂ ಸತ್ತವರಿಗೂ ನ್ಯಾಯತೀರಿಸುವವನು'' (2 ತಿಮೋ 4:1). ಅಬ್ರಹಾಮ ಇಸಾಕ ಯಾಕೋಬರು ನ್ಯಾಯ ತೀರ್ಪಿಗಾಗಿ ಸತ್ತವರೊಳಗಿಂದ ಎದ್ದು ಬಂದಾಗ ಅವರು ವಾಗ್ದಾನದ ಪ್ರಕಾರ ದೇಶವನ್ನು ಸ್ವಾಸ್ತ್ಯವನ್ನಾಗಿ ಪಡೆಯುವರು. ಹಾಗೆ ಮಾಡಿದಾಗ ಅವರು ದೇವರ ರಾಜ್ಯವನ್ನು ಸ್ವಾಸ್ತ್ಯವನ್ನಾಗಿ ಹೊಂದುತ್ತಾರೆ. ಏಕೆಂದರೆ ಅಲ್ಲಿಯೇ ದೇವರ ರಾಜ್ಯವು ಸ್ಥಾಪಿಸಲ್ಪಡುತ್ತದೆ. ಯೇಸುಕ್ರಿಸ್ತನು ಫರಿಸಾಯರಿಗೆ ಹೇಳುತ್ತಾನೆ ''ಅಬ್ರಹಾಮ ಇಸಾಕ ಯಾಕೋಬ ಇವರು ಮತ್ತು ಎಲ್ಲಾ ಪ್ರವಾದಿಗಳನ್ನೂ ದೇವರ ರಾಜ್ಯದಲ್ಲಿರುವದನ್ನೂ...ನೀವು ನೋಡುವಿರಿ... . ಇದಲ್ಲದೆ ಪೂರ್ವ ಪಶ್ಚಿಮ ಉತ್ತರ ದಕ್ಷಿಣ ದಿಕ್ಕುಗಳಿಂದಲೂ ಜನರು ಬಂದು ದೇವರ ರಾಜ್ಯದಲ್ಲಿ ಊಟಕ್ಕೆ ಕೂಡ್ರುವರು'' (ಲೂಕ 13:28—29). ಇದು ಪಿತೃಗಳಿಗೆ ಮಾಡಿದ ದೇಶದಲ್ಲಿಯೇ ಸಂಭವಿಸು[illegible]. ''ಯೆಹೋವನು ಯೆಹೂದವನ್ನು ತನ್ನ ಸ್ವಾಸ್ತ್ಯವನ್ನಾಗಿ ಅನುಭವಿಸುವನು. [illegible] ಯೆರೂಸಲೇಮನ್ನು [illegible] ಮತ್ತೆ ತನಗಾಗಿ ಆರಿಸಿಕೊಳ್ಳುವನು'' (ಜೆಕರ್ಯ 2:12)

(ಮುಂದುವರೆಯುವದು)

> ಆಗ ಅವನ ರಾಜ್ಯ ಪ್ರಭುತ್ವಗಳೂ ಸಮಸ್ತ ಭೂಮಂಡಲದಲ್ಲಿನ ರಾಜ್ಯಗಳ ಮಹಿಮೆಯೂ ಪರಾತ್ಪರನ ಭಕ್ತ ಜನರಿಗೆ ಕೊಡೋಣವಾಗುವವು. ಆತನ ರಾಜ್ಯವು ಶಾಶ್ವತ ರಾಜ್ಯ; ಸಕಲ ದೇಶಾಧಿಪತಿಗಳು ಆತನಿಗೆ ಅಧೀನರಾಗಿ ಸೇವೆ ಮಾಡುವರು.'' — ದಾನಿಯೇಲ 7:27.

## ಮೂಲ ನಂಬಿಕೆಗಳು.

(ಹಿಂದಿನ ಸಂಚಿಕೆಯಿಂದ)

### ಮನುಷ್ಯನು

9. ಒಬ್ಬನಾದರೂ ನೀತಿವಂತನಿಲ್ಲವೆಂದು ಸತ್ಯವೇದವು ಹೇಳುತ್ತದೆ. ಹಾಗಾದರೆ, ನೀತಿಯ ಮೇಲೆಯೇ ರಕ್ಷಣೆಯು ಅವಲಂಬಿಸಿದ್ದರೆ, ಅದು ಬರಲು ಹೇಗೆ ಸಾಧ್ಯ ?

ಮಾನವನನ್ನು ಅವನಷ್ಟಕ್ಕೇ ಇರಲು ಬಿಟ್ಟಿದ್ದರೆ, ಇರುತ್ತಿದ್ದ ಸ್ಥಿತಿಯನ್ನು ಸತ್ಯವೇದವು ವಿವರಿಸುತ್ತದೆ. ಆದರೆ ದೇವರು ಮಾನವನನ್ನು ಅವನಷ್ಟಕ್ಕೇ ಬಿಟ್ಟಿಲ್ಲ. ಆತನು ಅವನ ಕಾರ್ಯಗಳಲ್ಲಿ ಮಧ್ಯೆ ಪ್ರವೇಶಿಸಿ, ಒಂದು ನೀತಿಯ ಮಾರ್ಗವನ್ನು ತೆರೆದು ಅದರಲ್ಲಿ ನಡೆಯಲು ಮಾನವನನ್ನು ಆಹ್ವಾನಿಸುತ್ತಾನೆ. ದೇವರು ಯೇಸುಕ್ರಿಸ್ತನ ಮುಖಾಂತರ ನೀತಿಯನ್ನು ಸಮೀಪಕ್ಕೆ ತಂದಿದ್ದಾನೆ. ಮತ್ತು ಆತನಲ್ಲಿ ವಿಶ್ವಾಸವಿಟ್ಟು ಅದನ್ನು ಹಿಡಿದು ಕೊಳ್ಳಲು ಮಾನವರನ್ನು ಕೇಳುತ್ತಾನೆ.

ಯೆಶಾಯ 59:16; ರೋಮಾ 5:18; 1 ಕೊರಿಂಥ 1:30; ರೋಮಾ 10:3–4.

10. ಪಾಪಿಗಳಾಗಿರುವ ಮಾನವರು ಕ್ರಿಸ್ತನಲ್ಲಿ ದೇವರ ನೀತಿಯನ್ನು ಹೊಂದುವುದು ಹೇಗೆ ?

ಯಾಕಂದರೆ ಮಾನಸಾಂತರ ಪಡಲು ಅವರನ್ನು ಕರೆಯುತ್ತಾನೆ ಮತ್ತು ಅವರು ಕ್ರಿಸ್ತನನ್ನು ನಂಬಿ ಆತನ ಹೆಸರನ್ನು ಧರಿಸಿ ಕೊಂಡರೆ, ಅವರ ಪಾಪಗಳನ್ನು ಕ್ಷಮಿಸುವುದಾಗಿ ಹೇಳುತ್ತಾನೆ.

ಅ.ಕೃ.17:30; 13:38; ಯೆಶಾಯ 55:7; ಅ.ಕೃ.2:38; 4:12.

11. ಕ್ರಿಸ್ತನಲ್ಲಿ ನಂಬಿಕೆ ಮಾತ್ರ ಇರುವವರು ರಕ್ಷಣೆ ಹೊಂದುತ್ತಾರೆಯೋ?

ಇಲ್ಲ. ನಂಬಿಕೆಯು ಹಿಂದಿನ ಎಲ್ಲಾ ಪಾಪಗಳಿಂದ ಮುಕ್ತರನ್ನಾಗಿ ಮಾಡುತ್ತದೆ. ಮತ್ತು ದೇವರೊಂದಿಗೆ ಸಮಾಧಾನವನ್ನು ತರುತ್ತದೆ. ಆದರೆ ಆತನ ಪ್ರೀತಿಯನ್ನು ಉಳಿಸಿಕೊಳ್ಳಲು ಮತ್ತು ಕೊನೆಯಲ್ಲಿ ಸ್ವೀಕಾರವನ್ನು ಪಡೆಯಲು ಕ್ರಿಯೆಗಳು ಅವಶ್ಯವಾಗಿವೆ.

ರೋಮಾ 5:1; 1 ಕೊರಿ 10:12; ರೋಮಾ 8:13; 2 ಪೇತ್ರ 2:20; ಯಾಕೋಬ 2:24; ಪ್ರಕ 2:5, 23.

### ಕ್ರಿಸ್ತನನ್ನು ಕುರಿತದ್ದು

1. ಯೇಸುಕ್ರಿಸ್ತನು ಯಾರಾಗಿದ್ದನು?

ಯೇಸುಕ್ರಿಸ್ತನು ದೇವರ ಮಗನಾಗಿದ್ದನು.

ಮತ್ತಾ 3:17; ಯೋಹಾನ 10:36; 1:49; ಮಾರ್ಕ 15:39; ಯೋಹಾನ 1:34.

2. ಯೇಸುಕ್ರಿಸ್ತನು ದೇವರ ಮಗನಲ್ಲದೆ ಮನುಷ್ಯನೂ ಆಗಿದ್ದನೆ ?

ಹೌದು. ಆತನು ಒಬ್ಬ ಮನುಷ್ಯನಾಗಿದ್ದನು. ಎಲ್ಲಾ ವಿಷಯಗಳಲ್ಲಿ ನಮ್ಮ ಹಾಗೆಯೇ ಮಾಡಲ್ಪಟ್ಟನು. ಆದರೂ ಪಾಪ ಮಾತ್ರ ಮಾಡಲಿಲ್ಲ.

ಅ.ಕೃ.2:22; 1 ತಿಮೊ 2:5; ಅ.ಕೃ.13:38; ಇಬ್ರಿಯ 2:17.

3. ಯೇಸು ಕ್ರಿಸ್ತನು ಹೇಗೆ ಒಟ್ಟಿಗೇ ಮನುಷ್ಯನೂ ದೇವಕುಮಾರನೂ ಆಗಿದ್ದನು ?

ಯಾಕಂದರೆ ಆತನು ಮಾನವ ಕನ್ಯಾ-ತಾಯಿಯಲ್ಲಿ ದೇವರ ಶಕ್ತಿಯಿಂದ ಹುಟ್ಟಿದನು. ಮಾನವ ತಂದೆಯಿಂದಲ್ಲ. ಮರಿಯಳು ದಾವೀದನ ವಂಶದವಳಾಗಿದ್ದಳು ಮತ್ತು ಅವಳು ದಾವೀದನ ವಂಶದ ಯೋಸೇಫನಿಗೆ ನಿಷ್ಕರ್ಷೆಯಾಗಿದ್ದಳು. ದೇವರು ಆತನ ತಂದೆಯಾಗಿದ್ದನು. ಆದ್ದರಿಂದ ತಂದೆಯ ಕಡೆಯಿಂದ ಆತನು ದೇವರ ಮಗನಾಗಿದ್ದನು; ತಾಯಿಯ ಕಡೆಯಿಂದ ದಾವೀದಕುಮಾರನಾಗಿದ್ದನು. ಆದ್ದರಿಂದ ನಮ್ಮೆಲ್ಲರಿಗೂ ಇರುವ ಕೃತಿಯಾದ ದಾವೀದನ ಪ್ರಕೃತಿಯನ್ನು ಹೊಂದಿದ ಒಬ್ಬ ಮನುಷ್ಯನಾಗಿದ್ದನು.

ಮತ್ತಾ 1:20; ಲೂಕ 1:35; ಮತ್ತಾ 1:1; ಗಲಾತ್ಯ 4:4; ಫಿಲಿಪ್ಪಿ 2:8; ಇಬ್ರಿಯ 4:15.

4. ಹಾಗಿದ್ದಲ್ಲಿ ಯೇಸು ಕ್ರಿಸ್ತನು ಒಟ್ಟಿಗೇ ದೈವೀಕನೂ ಹಾಗೂ ಮಾನವನೂ ಆಗಿದ್ದನೋ ?

ಆತನು ಮಾಡಲ್ಪಟ್ಟ ಶರೀರದಿಂದಾಗಿ ಆತನು ಮಾನವನಾಗಿದ್ದನು. ಆದರೆ ಆತನು ಉಂಟುಮಾಡಲ್ಪಟ್ಟ ಮೂಲದಿಂದಾಗಿ ದೈವೀಕವಾಗಿದ್ದನು. ತನ್ನ ಜ್ಞಾನವನ್ನು ಎಲ್ಲಿಂದ ಪಡೆದು ಕೊಂಡನೋ ಆ ಶಕ್ತಿಯು ಮತ್ತು ಆತನ ಗುಣ ಲಕ್ಷಣಗಳು ದೈವೀಕವಾಗಿದ್ದವು.

ಇಬ್ರಿಯರು 2:14; ಯೋಹಾನ 6:38; ಲೂಕ 2:40; ಯೋಹಾನ 1:14.

(ಮುಂದುವರೆಯುವುದು.

> ಲಯವಾಗುವ ಬೀಜದಿಂದಲ್ಲ, ಲಯವಾಗದಿದ್ದರಿಂದಲೇ, ಎಂದೆಂದಿಗೂ ಇರುವ ಜೀವವುಳ್ಳ ದೇವರ ವಾಕ್ಯದ ಮೂಲಕವಾಗಿ ತಿರಿಗಿ ಹುಟ್ಟಿದಿರಲ್ಲ. — 1 ಪೇತ್ರ 1:23,

ನಮ್ಮಲ್ಲಿ ದೊರೆಯುವ ಉಚಿತ ಕರಪತ್ರ/ ಕಿರು ಹೊತ್ತಿಗೆಗಳಿಗೆ ಬರೆಯಿರಿ :—

1. ನೀವು ತಿಳಿಯಲೇಬೇಕಾದ ಏಳು ಸಂಗತಿಗಳು.
2. ಕರ್ತನು ಹೀಗೆ ಹೇಳುತ್ತಾನೆ.
3. ದೈನಂದಿನ ಸತ್ಯವೇದ ಪಠಣ ತಃಖ್ತೆ.
4. ಸತ್ಯದಲ್ಲಿ ಜೀವಿಸುವಾಗ.
5. ಮೂಲ ಸುವಾರ್ತೆ.
6. ಲೂಸಿಫರನು ಯಾರು ?
7. ಸೈತಾನನು ಸಂಪ್ರದಾಯದೋ ಅಥವಾ ಸತ್ಯವೇದದೋ ?

ಅಲ್ಲದೆ ಇತರ ಭಾಷೆಗಳಲ್ಲಿಯೂ (ಇಂಗ್ಲಿಷ ಸಹ) ಕೆಲವು ಕರಪತ್ರ / ಕಿರುಹೊತ್ತಿಗೆಗಳು ಉಚಿತವಾಗಿ ನಮ್ಮಲ್ಲಿ ದೊರೆಯುತ್ತವೆ — ಇಂದೇ ಬರೆಯಿರಿ.

ಸ್ಥಳೀಯ ವಿಳಾಸಗಳು :—

ದಿ ಕ್ರಿಸ್ಟಡೆಲ್ಫಿಯನ್ಸ್,
ಕೇರ್ ಆಫ್ ಸಿಟಿ ಡ್ರಗ್ ಹೌಸ್,
ರಾಜೇಂದ್ರ ಪ್ರಸಾದ್ ರಸ್ತೆ,
ಮಂಡ್ಯ 571 401.
ಕರ್ನಾಟಕ.

ದಿ ಕ್ರಿಸ್ಟಡೆಲ್ಫಿಯನ್ಸ್,
ಪಿ. ಓ. ಬಾಕ್ಸ್ 159,
ಹೈದರಾಬಾದ್ 500 001,
ಆಂಧ್ರ ಪ್ರದೇಶ.

> ಆದಕಾರಣ ನೀವು ಸಹ ಸಿದ್ಧವಾಗಿರ್ರಿ; ನೀವು ನೆನಸದ ಗಳಿಗೆಯಲ್ಲಿ ಮನುಷ್ಯ ಕುಮಾರನು ಬರುತ್ತಾನೆ.
> — ಮತ್ತಾಯ 24:44.

ಇಲ್ಲಿ ಕತ್ತರಿಸಿ— — — — — — — — — — — — — — — — — — — —

ಗೆ — ನಂ.

ಸಂಪಾದಕರು,
ಶುಭವಾರ್ತೆ,
23/4, ಬೆನ್ಸನ್ ರಸ್ತೆ, ಬೆಂಗಳೂರು 560046.

ಹೆಸರು: ಶ್ರೀ/ಶ್ರೀಮತಿ/ಕುಮಾರಿ _ _ _ _ _ _ _ _ _ _ _ _ _ _ _ _

ವಿಳಾಸ: _ _ _ _ _ _ _ _ _ _ _ _ _ _ _ _ _ _ _ _ _ _ _ _

ಜಿಲ್ಲೆ: _ _ _ _ _ _ _ _ _ _ _ _ _ _ ಪಿನ್ _ _ _ _ _ _ _ _

ದಯವಿಟ್ಟು ಇನ್ನು ಮುಂದೆಯೂ ನಿಮ್ಮ ಶುಭವಾರ್ತೆ ಪತ್ರಿಕೆಯನ್ನು ತಪ್ಪದೆ ನನಗೆ ಉಚಿತವಾಗಿ ಕಳುಹಿಸ ಬೇಕೆಂದು ಕೋರುತ್ತೇನೆ.

ಸಹಿ : _ _ _ _ _ _ _ _ _ _ _ _ _

(ಇದನ್ನು ಅಂಚೆ ಕಾರ್ಡಿನಲ್ಲಿ ಬರೆದೂ ಕೂಡಾ ಕಳುಹಿಸಬಹುದು.)